ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯನ್ಯಾಯಿಕ ದಂಡಾಧಿಕಾರಿಗಳು, ಉಡುಪಿ.

ಓ.ಎಸ್ ಸಂಖ್ಯೆಃ 54/1997

ಡಿಡಬ್ಲ್ಯುಃ 1

| | |
|---|---|
| ಸಾಕ್ಷಿದಾರರ ಹೆಸರು | ಃ ಸಂಜೀವ ಮಾಬೆನ್ |
| ತಂದೆಯ ಹೆಸರು | ಃ ತಬುರ ಪೂಜಾರಿ |
| ವಯಸ್ಸು | ಃ 71 ವರ್ಷ |
| ಉದ್ಯೋಗ | ಃ ನಿವೃತ್ತ ಬ್ಯಾಂಕ್ ಉದ್ಯೋಗಿ |
| ವಿಳಾಸ | ಃ ಪರ್ಕಳ, ಉಡುಪಿ |

ದಿಃ 16-8-2014ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಪ್ರತಿವಾದಿ ಪರ ವಕೀಲರು ಈ ಸಾಕ್ಷಿಯು ಈ ಹಿಂದೆ ಇದೇ ಮೊಕದ್ದಮೆಯಲ್ಲಿ ಪ್ರತಿವಾದಿಗಳ ಹಿತಾಸಕ್ತಿಗೆ ವಿರುದ್ದವಾಗಿ ಒಂದು ಪ್ರಮಾಣಪತ್ರ ಸಲ್ಲಿಸಿರುವುದರಿಂದ ಈ ಸಾಕ್ಷಿಯನ್ನು ಪಾಟೀಸವಾಲು ಮಾಡಲು ಅನುಮತಿ ಕೇಳಿರುತ್ತಾರೆ. ಆದ್ದರಿಂದ ಈ ಸಾಕ್ಷಿಯು ಈ ಹಿಂದೆ ಇದೇ ಕೇಸಿನಲ್ಲಿ ಸಲ್ಲಿಸಿರುವ ಪ್ರಮಾಣಪತ್ರವನ್ನು ಪರಿಶೀಲಿಸಿದಾಗ ಸಾಕ್ಷಿ ಪ್ರತಿವಾದಿಗಳ ಹಿತಾಸಕ್ತಿಗೆ ವಿರುದ್ದವಾಗಿ ಪ್ರಮಾಣಪತ್ರ ಸಲ್ಲಿಸಿರುವುದು ಕಂಡುಬರುತ್ತದೆ. ಆ ಕಾರಣಕ್ಕಾಗಿ ಪ್ರತಿವಾದಿ ಪರ ವಕೀಲರು ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.

**ಪ್ರತಿವಾದಿಗಳ ಪರ ಪಾಟೀಸವಾಲುಃ** ಶ್ರೀ ಕೆ.ಬಿ.ಆರ್ ವಕೀಲರಿಂದ.

1987 ರಿಂದ 1989ರ ವರೆಗೆ ಅಂದಿನ ಮದ್ರಾಸ್ ಕೆನರಾ ಬ್ಯಾಂಕ್ ಶಾಖೆಯಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡಿರುತ್ತೇನೆ. ಜೈ ಹಿಂದ್ ಬಿಲ್ಡಿಂಗ್‌ಗೆ ನಾನು 1995 ರಲ್ಲಿ ಬಂದಿರುತ್ತೇನೆ. 1989 ರಲ್ಲಿ ಮದ್ರಾಸ್‌ನಿಂದ ವೆಲ್ಲೂರ್‌ಗೆ ವರ್ಗಾವಣೆಯಾಗಿದ್ದು ವೆಲ್ಲೂರ್‌ನಲ್ಲಿ ನಾನು 1991ರ ವರೆಗೆ ಇದ್ದೆ. ನಾನು ಕೆನರಾ ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾಗ ನನಗೆ ವರ್ಷವೊಂದಕ್ಕೆ 1 ತಿಂಗಳ ರಜೆ ಇತ್ತು ಎಂದರೆ ಸರಿ. ನಾನು ವಾಸ ಮಾಡುತ್ತಿರುವ ಜೈ ಹಿಂದ್ ಬಿಲ್ಡಿಂಗ್‌ಗೂ ಪ್ರತಿವಾದಿಗಳು ವಾಸ ಮಾಡುತ್ತಿರುವ ಮನೆಗೂ ಸುಮಾರು 2 ಫರ್ಲಾಂಗ್ ದೂರ ಇರುತ್ತದೆ. ನನ್ನ ಮಾವ ಬೈಕು ಪೂಜಾರಿ ಸಹಾ ಈಗ ಪ್ರತಿವಾದಿಗಳು ವಾಸ ಮಾಡುತ್ತಿರುವ ಮನೆಯಲ್ಲಿಯೇ ವಾಸ ಮಾಡುತ್ತಿದ್ದರು ಎಂದರೆ ಸರಿ. ಬೈಕು ಪೂಜಾರಿ ಅವರು ತೀರಿ ಹೋದ ಸಮಯದಲ್ಲಿ ನಾನು ಶಿವಮೊಗ್ಗದ ಕೆನರಾ ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ. ನಾನು ನನ್ನ ಮಾವ ಬೈಕು ಪೂಜಾರಿಯವರ ಜೊತೆ ಸಲುಗೆಯಿಂದ ಇರಲಿಲ್ಲ. ಬೈಕು

ಪೂಜಾರಿಯವರಿಗೆ ನನ್ನ ಮೇಲೆ ತುಂಬಾ ವಿಶ್ವಾಸ ಇತ್ತು ಎಂಬುದು ನನಗೆ ಗೊತ್ತಿಲ್ಲ. ನನ್ನ ಮತ್ತು ಜಯ ಪೂಜಾರಿಯವರ ಮಧ್ಯೆ ಬಹಳ ವರ್ಷದಿಂದ ಮಾತುಕತೆ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು 2002 ರಿಂದ ಮಾತ್ರ ನಾನು ಮತ್ತು ಜಯ ಪೂಜಾರಿ ಅವರು ಮಾತನಾಡುತ್ತಿಲ್ಲ. ಅದಕ್ಕಿಂತ ಮೊದಲು ಚೆನ್ನಾಗಿದ್ದೆ ಎಂದು ಉತ್ತರಿಸುತ್ತಾರೆ. ನನಗೆ ರಕ್ತದೊತ್ತಡ ಮತ್ತು ಮಧುಮೇಹ ಇರುವುದರಿಂದ ನೆನಪಿನ ಶಕ್ತಿಯೇನೂ ಕಮ್ಮಿಯಾಗಿಲ್ಲ. ನನಗೆ ಇಂಗ್ಲೀಷ್ ಓದಲು, ಬರೆಯಲು ಚೆನ್ನಾಗಿ ಬರುತ್ತದೆ. ನಾನು ಮೊದಲಿನಿಂದಲೂ ಇಂಗ್ಲೀಷ್‌ನಲ್ಲಿಯೇ ರುಜು ಮಾಡುತ್ತೇನೆ ಎಂದರೆ ಸರಿ. ನಾನು ಬ್ಯಾಂಕ್‌ನಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದಾಗ ಪ್ರಮುಖ ಸಾಲದ ಕಾಗದ ಪತ್ರಗಳಿಗೆ ಮ್ಯಾನೇಜರ್ ಆಗಿ ನಾನೇ ಸಹಿ ಮಾಡುತ್ತಿದ್ದೆ. ಈ ವ್ಯಾಜ್ಯದ ಆಸ್ತಿಗಳಲ್ಲಿ ನನಗೆ ಯಾವುದೇ ಹಿತಾಸಕ್ತಿ ಇಲ್ಲ. ಈ ದಿನ ನಾನು ನ್ಯಾಯಾಲಯಕ್ಕೆ ಬರುವುದಕ್ಕಿಂತ ಮೊದಲು ನನ್ನ ಹೆಂಡತಿ ಅಂದರೆ 4ನೇ ವಾದಿಗೆ ನೀನು ಸಲ್ಲಿಸಿರುವ ದಾವೆಯಲ್ಲಿ ಸಾಕ್ಷ್ಯ ನುಡಿಯಲು ಹೋಗುತ್ತಿದ್ದೇನೆ ಎಂದು ಹೇಳಿ ಬಂದಿರುತ್ತೇನೆ. ಈ ದಿನ ಕೇಸು ಇರುವ ವಿಚಾರವನ್ನು ನಾನು ನನ್ನ ಪರವಾಗಿ ನೇಮಿಸಿಕೊಂಡ ನಾಗರಾಜ್ ವಕೀಲರು ತಿಳಿಸಿದ್ದರು. ದಿಃ 07.07.2014 ರಂದು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುವಂತೆ ನನಗೆ ಸಮ್ಮನ್ಸ್ ಬಂದಿತ್ತು. ಆ ದಿನ ನಾನು ಬೆಂಗಳೂರಿಗೆ ಹೋಗಿದ್ದು ಉಡುಪಿಯಲ್ಲಿ ಇಲ್ಲದೇ ಇದ್ದುದರಿಂದ ಸದ್ರಿ ದಿನದಂದು ನ್ಯಾಯಾಲಯಕ್ಕೆ ಬರಲು ಸಾಧ್ಯ ಆಗದೇ ಇದ್ದುದರಿಂದ ನನ್ನ ಪರವಾಗಿ ನ್ಯಾಯಾಲಯದಲ್ಲಿ ಹಾಜರಾಗಲು ನಾಗರಾಜ್ ಎಂಬ ವಕೀಲರನ್ನು ನೇಮಿಸಿಕೊಂಡಿದ್ದೆ. ದಿಃ 07.07.2014 ರಂದು ನಾನು ಉಡುಪಿಯಲ್ಲಿಯೇ ಇದ್ದು ಬೆಂಗಳೂರಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಆರೋಗ್ಯ ಸರಿ ಇಲ್ಲದೇ ಇದ್ದುದರಿಂದ ಆ ದಿನ ನಾನು ಆರೋಗ್ಯ ತಪಾಸಣೆಗಾಗಿ ಬೆಂಗಳೂರಿಗೆ ಹೋಗಿದ್ದೆ. ಬೆಂಗಳೂರಿಗೆ ನಾನು ಬಸ್ಸಿನಲ್ಲಿ ಹೋಗಿದ್ದೆ. ಬಸ್ಸಿನಲ್ಲಿ ಪ್ರಯಾಣ ಮಾಡಿದ ಬಗ್ಗೆ ಟಿಕೇಟ್ ಇಲ್ಲ. ಆ ದಿನ ನಾನು ಬೆಂಗಳೂರಿಗೆ 5ನೇ ವಾದಿಯ ಗಂಡ ಶೀನ ಪೂಜಾರಿಯವರ ಜೊತೆ ಹೋಗಿದ್ದೆ. ನಾನು ನನ್ನ ಪರವಾಗಿ ನೇಮಿಸಿಕೊಂಡಿದ್ದ ನಾಗರಾಜ ವಕೀಲರ ಕಚೇರಿ ಪತ್ರ ಬರಹಗಾರರಾದ ಹೊಳ್ಳ ಅವರ ಕಚೇರಿ ಬಳಿ ಇದೆ ಎಂಬುದು ನನಗೆ ಗೊತ್ತಿಲ್ಲ. ನಾಗರಾಜ ವಕೀಲರ ಬಳಿ ಎಷ್ಟು ಜನ ಸಹಾಯಕ ವಕೀಲರಿದ್ದಾರೆ ಎಂಬುದು ಗೊತ್ತಿಲ್ಲ. ಆದರೆ ಈ ದಿನ ನನ್ನ ಪರವಾಗಿ ರವಿ ಕುಮಾರ್ ಎಂಬ

ವಕೀಲರು ಹಾಜರಾಗಿರುತ್ತಾರೆ. ನಾನು ಬೆಂಗಳೂರಿನಲ್ಲಿ 4 ದಿನ ಇದ್ದೆ. ಆ ಅವಧಿಯಲ್ಲಿ ನನ್ನ ಹೆಂಡತಿಗೆ ಮಾತ್ರ ದೂರವಾಣಿ ಕರೆ ಮಾಡಿದ್ದು ಬೇರೆ ಯಾರಿಗೂ ಮಾಡಿರಲಿಲ್ಲ. ಬೆಂಗಳೂರಿನಲ್ಲಿ ನಾನು ಶೀನ ಪೂಜಾರಿಯವರ ಮಗನ ಮನೆಯಲ್ಲಿ ವಾಸ್ತವ್ಯ ಮಾಡಿದ್ದೆ. ನನ್ನನ್ನು ಬೆಂಗಳೂರಿನಲ್ಲಿ ಶೀನ ಪೂಜಾರಿಯವರ ಮಗ ವೈದ್ಯರ ಬಳಿ ಕರೆದುಕೊಂಡು ಹೋಗಿದ್ದ. ಆ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ನನ್ನ ರಕ್ತದೊತ್ತಡ ಮತ್ತು ಮಧುಮೇಹಕ್ಕೆ ಮಣಿಪಾಲದ ಕೆಎಮ್‌ಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೇನೆ. ಅದರ ಜೊತೆಗೆ ಆಯುರ್ವೇದ ಮೆಡಿಕಲ್ ಆಸ್ಪತ್ರೆಯಲ್ಲಿಯೂ ಸಹಾ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೇನೆ. ನಾನು ಬೆಂಗಳೂರಿಗೆ ಹೋಗುವುದಕ್ಕಿಂತ ಸುಮಾರು ವರ್ಷಗಳ ಮೊದಲಿನಿಂದಲೂ ನಾನು ಮಣಿಪಾಲದ ಕೆಎಮ್‌ಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ನಾನು ಕೆಎಮ್‌ಸಿ ಆಸ್ಪತ್ರೆಯ ವಾಸುದೇವ ಆಚಾರ್ಯ ಅವರ ಬಳಿ ಚಿಕಿತ್ಸೆ ಪಡೆಯುತ್ತಿದ್ದೇನೆ. ವಾಸುದೇವ ಆಚಾರ್ಯ ಅವರು ನುರಿತ ವೈದ್ಯರು ಎಂದರೆ ಸರಿ. ವಾಸುದೇವ ಆಚಾರ್ಯ ಅವರು ಬೆಂಗಳೂರಿನಲ್ಲಿ ಹೆಚ್ಚಿನ ಚಿಕಿತ್ಸೆ ಪಡೆದುಕೊಳ್ಳುವಂತೆ ನನಗೆ ಸಲಹೆ ನೀಡಿಲ್ಲ. ಆದರೆ ಶೀನ ಪೂಜಾರಿಯವರು ಬೆಂಗಳೂರಿನಲ್ಲಿ ಕೇರಳದ ಆಯುರ್ವೇದಿಕ್ ವೈದ್ಯರಿದ್ದಾರೆ ಎಂದು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದರು. ನಾನು ಬೆಂಗಳೂರಿನಲ್ಲಿ 1 ವಾರ ನನ್ನ ರಕ್ತದೊತ್ತಡ ಮತ್ತು ಮಧುಮೇಹಕ್ಕೆ ಚಿಕಿತ್ಸೆ ಪಡೆದಿರುತ್ತೇನೆ. ನಾನು ಬೆಂಗಳೂರಿನಿಂದ ವಾಪಾಸ್ಸು ಬಂದ ನಂತರ ನಾನು ಕೆಎಮ್‌ಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದ ವೈದ್ಯರಾದ ವಾಸುದೇವ ಆಚಾರ್ಯ ಅವರನ್ನು ಭೇಟಿ ಮಾಡಿಲ್ಲ ಮತ್ತು ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದಿದ್ದನ್ನು ತಿಳಿಸಿಲ್ಲ. ಬೆಂಗಳೂರಿನಲ್ಲಿರುವ ಶೀನ ಪೂಜಾರಿಯವರ ಮಗನ ಮನೆಯ ವಿಳಾಸ ಗೊತ್ತಿಲ್ಲ. ನ್ಯಾಯಾಲಯದಿಂದ ಸಮ್ಮನ್ಸ್ ಬಂದ ವಿಚಾರವನ್ನು ನನ್ನ ಹೆಂಡತಿ ನನಗೆ ಫೋನಿನಲ್ಲಿ ತಿಳಿಸಿದ್ದು ನಂತರ ನಾನು ನಾಗರಾಜ ವಕೀಲರಿಗೆ ಸಮಯ ತೆಗೆದುಕೊಳ್ಳುವಂತೆ ಬೆಂಗಳೂರಿನಿಂದ ಫೋನಿನಲ್ಲಿ ಹೇಳಿದ್ದೆ. ಸುಮಾರು 4-5 ವರ್ಷಗಳಿಂದ ನಾನು ಮೊಬೈಲ್ ಫೋನ್ ಉಪಯೋಗಿಸುತ್ತಿದ್ದೇನೆ. ಈ ಕೇಸಿನಲ್ಲಿ ವಾದಿಗಳು ಸಲ್ಲಿಸಿದ ತಾತ್ಕಾಲಿಕ ನಿರ್ಬಂದಕಾಜ್ಞೆ ಅರ್ಜಿಯಲ್ಲಿ ವಾದಿಗಳ ಪರವಾಗಿ ನಾನು ದಿ: 04.03.2002ರಂದು ಪ್ರಮಾಣಪತ್ರ ಸಲ್ಲಿಸಿದ್ದೇನೆ ಎಂದರೆ ಸರಿ. ವಾದಿಗಳ ಪರವಾಗಿ ಪ್ರಮಾಣಪತ್ರ ಸಲ್ಲಿಸಲು ನನ್ನ ಹೆಂಡತಿಯ ವಕೀಲರಾದ ಹೆಚ್.ಎನ್.ಶೆಟ್ಟಿಯವರು ತಮ್ಮ ಕಚೇರಿಗೆ ಬರುವಂತೆ ನನಗೆ ತಿಳಿಸಿದ್ದರು. ನನ್ನನ್ನು

ಪ್ರತಿವಾದಿಗಳ ಪರ ಸಾಕ್ಷಿಯಾಗಿ ತೋರಿಸಿ ಅವರು ಪ್ರತಿವಾದ ಪತ್ರದೊಂದಿಗೆ ಸಾಕ್ಷಿ ಪಟ್ಟಿ ಸಲ್ಲಿಸಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ದಿ: 04.03.2002 ರಂದು ನಾನು ಸಲ್ಲಿಸಿದ ಪ್ರಮಾಣಪತ್ರವನ್ನು ನಾನು ಹೇಳಿದ ಮೇರೆಗೆ ಹೆಚ್.ಎನ್.ಶೆಟ್ಟಿ ವಕೀಲರು ಸಿದ್ದಪಡಿಸಿರುತ್ತಾರೆ ಎಂದು ನನಗೆ ಅನ್ನಿಸಿತ್ತು. ನಾನು ಸಲ್ಲಿಸಿದ ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ನಾನು ಓದಲಿಲ್ಲ. ಆದರೆ, ವಕೀಲರು ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಸಹಿ ಮಾಡಿದ್ದೆ. ಪ್ರಮಾಣಪತ್ರಕ್ಕೆ ನಾನು ಸಹಿ ಮಾಡಿದ ನಂತರ ವಕೀಲರ ಕಚೇರಿಯಿಂದ ನೇರವಾಗಿ ನನ್ನ ಮನೆಗೆ ಹೋಗಿದ್ದೆ. ಹೆಚ್.ಎನ್.ಶೆಟ್ಟಿ ವಕೀಲರು ಪ್ರಮಾಣಪತ್ರಕ್ಕೆ ನನ್ನ ಸಹಿ ಪಡೆದುಕೊಳ್ಳಲು ಬಯಸಿದ್ದರು. ದಿ: 04.03.2002 ರಂದು ನಾನು ಸಲ್ಲಿಸಿದ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂಬುದು ಇಲ್ಲಿಯವರೆಗೂ ನನಗೆ ಗೊತ್ತಿಲ್ಲ. ಹೆಚ್.ಎನ್.ಶೆಟ್ಟಿ ವಕೀಲರು ನಿಮ್ಮ ಮಾವ ಒಂದು ವಿಲ್ ಬರೆದಿರುತ್ತಾರೆ ಅದಕ್ಕೆ ನೀವು ಸಾಕ್ಷಿಯಾಗಿ ರುಜು ಮಾಡಿರುತ್ತೀರಿ ಆ ಬಗ್ಗೆ ನೀವು ಪ್ರಮಾಣಪತ್ರ ಸಲ್ಲಿಸಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆ ಸಂದರ್ಭದಲ್ಲಿ ನನ್ನ ಮಾವ ಬರೆದಿರುವ ಮರಣ ಶಾಸನದ ಜೆರಾಕ್ಸ್ ಪ್ರತಿಯನ್ನು ನನಗೆ ತೋರಿಸಿದ್ದರು. ಸದ್ರಿ ಮರಣಶಾಸನದ ಜೆರಾಕ್ಸ್ ಪ್ರತಿಯನ್ನು ನಾನು ಓದಿದ್ದೆ. ಹೆಚ್.ಎನ್.ಶೆಟ್ಟಿ ವಕೀಲರ ಬಳಿ ಸದ್ರಿ ಮರಣ ಶಾಸನದ ಜೆರಾಕ್ಸ್ ಪ್ರತಿ ಹೇಗೆ ಬಂತು ಎಂಬುದು ನನಗೆ ಗೊತ್ತಿಲ್ಲ. ಸದ್ರಿ ಮರಣಶಾಸನದ ಜೆರಾಕ್ಸ್ ಪ್ರತಿಯನ್ನು ನಾನು ಓದಿದ ನಂತರ ಸದ್ರಿ ಮರಣಶಾಸನವನ್ನು ನನ್ನ ಮಾವ ಬೈಕು ಪೂಜಾರಿಯವರು ಬರೆದಿರುತ್ತಾರೆ ಎಂಬುದು ಕಂಡು ಬಂದಿರುತ್ತದೆ. ಈಗ ನಾನು ನೋಡುತ್ತಿರುವ ದಿ: 13.09.1988ರ ಮರಣಶಾಸನ ನಾನು ಆ ದಿನ ಹೆಚ್.ಎನ್.ಶೆಟ್ಟಿ ವಕೀಲರ ಕಚೇರಿಯಲ್ಲಿ ಓದಿದ ಮರಣಶಾಸನದ ಜೆರಾಕ್ಸ್ ಪ್ರತಿಯ ಮೂಲ ಪ್ರತಿ ಇರುತ್ತದೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಉಡುಪಿ.